# ಹೂವ ತರುವರ ಮನೆಗೆ ಹುಲ್ಲ ತರುವ

1. **Ref.:** Shri Purandara Dasara Sahitya Part – 3, Mahatmya Gnyana, edited by Shri Betageri Krishna Sharma and Shri Bengeri Huchhu Rayaru, page No. 5.
2. **Ref.:** Purandara Sahitya Darshana, Samputa 2, Adhyatma Darshana edited by Prof. S.K. Ramachandra Rao, page No. 424.
3. **Note:** Lyrics mentioned without highlights are as per Ref. 2. The wordings in Ref. 1 are slightly different and are given separately in green highlights.
4. **Note:** Singer has followed lyrics as in Ref. 2.

ರಾಗ: ಕಾಂಬೋದಿ ತಾಳ: ಝಂಪೆ

ಹೂವ ತರುವರ ಮನೆಗೆ ಹುಲ್ಲ ತರುವ
ಅವ್ವ ಲಕುಮೀ ರಮಣ ಇವಗಿಲ್ಲ ಗರುವ ॥ ಪ ॥

ಒಂದು ದಳ ಶ್ರೀ ತುಳಸಿ ಬಿಂದು ಗಂಗೋದಕವ
ಇಂದಿರಾ ರಮಣಗೆ ಅರ್ಪಿತವೆನ್ನುತ
ಒಂದೆ ಮನದಲಿ ಸಿಂಧು ಶಯನ ಮುಕುಂದ ಎನೆ
ಎಂದೆಂದು ವಾಸಿಪನಾ ಮಂದಿರದ ಒಳಗೆ ॥ 1 ॥

ಪರಿಪರಿಯ ಪುಷ್ಪಗಳ ಪರಮಾತ್ಮಗರ್ಪಿಸಿ
ಪರಿಪೂರ್ಣನೆಂದು ಪೂಜೆಯನು ಮಾಡೆ
ಸರಸಿಜಾಕ್ಷನು ತನ್ನ ಸಕಲ ಸ್ವಾತಂತ್ರ್ಯದಲಿ
ಸರಿ ಭಾಗ ಕೊಡುವ ತನ್ನ ಅರಮನೆಯ ಒಳಗೆ ॥ 2 ॥

ಪಾಂಡವರ ಮನೆಯೊಳಗೆ ಕುದುರೆಗಳ ತಾ ತೊಳೆದು
ಪುಂಡರೀಕಾಕ್ಷ ತಾ ಹುಲ್ಲ ತಂದ
ಅಂಡಜಾಧಿಪ ನಮ್ಮ ಪುರಂದರ ವಿಠ್ಠಲನು
ತೊಂಡರಿಗೆ ತೊಂಡನಾಗಿ ಸಂಚರಿಸುತಿಹನು ॥ 3 ॥

**Note:** The below given lyrics in green highlights are as per the book in Ref.1 above.

ರಾಗ: ಕಾಂಬೋದಿ ತಾಳ: ಝಂಪೆ

ಹೂವ ತರುವರ ಮನೆಗೆ ಹುಲ್ಲ ತರುವ
ಅವ್ವ ಲಕುಮಿಯ ರಮಣ ಅವಗಿಲ್ಲ ಗರುವ ॥ ಪ ॥

ಒಂದು ದಳ ಶ್ರೀ ತುಳಸಿ ಗಂಧ ಪುಷ್ಪವ ತಂದು
ಇಂದಿರಾ ಕಾಂತನಿಗೆ ಅರ್ಪಿಸಿರಲು
ಬಂಧುಗಳ ಪರಿಹರಿಸಿ ಸಿಂಧು ಶಯನನು ತನ್ನ
ಮಂದಿರದೊಳಿರಿಸಿ ಆನಂದವುಣಿಸುವನು ॥ 1 ॥

ಪರಿ ಪರಿಯ ಪೂಜೆಗಳ ಕರಿವರದಗರ್ಪಿಸಲು
ಪರಿಪೂರ್ಣ ತಾನವನ ಕರವ ಪಿಡಿದು
ಸರಸಿಜಾಕ್ಷನು ತ್ವರದಿ ಸಾರೂಪ್ಯವನ್ನಿತ್ತು
ಮರುತನಂತರ್ಗತನು ಹರುಷದಲಿ ಪೊರೆವ ॥ 2 ॥

ತೊಂಡರಾ ಮನೆಗಳಲಿ (ತೊಂಡಗೆಲಸವ ಗೈವ)
ಪಾಂಡವರ ಮನೆಯಲ್ಲಿ ಕುದುರೆಗಳ ತೊಳೆದ
ಅಂಡಜಾಸನ ನಮ್ಮ ಪುರಂದರ ವಿಠ್ಠಲನು
ತೊಂಡರಿಗೆ ತೊಂಡನಾದ ಹಿಂಡು ದೈವದ ಗಂಡ ॥ 3 ॥

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

ಭಕ್ತಿಯಿಂದ ಸುಲಭಪೂಜೆಯನ್ನು ಮಾಡಿ ಒಂದೇ ಹೂವನ್ನು ಒಪ್ಪಿಸಿದರೆ, ಅಂಥವರಿಗೂ ಒಲಿದು ಅದರ ಬದುಕಿನ ಎಲ್ಲ ಭಾರವನ್ನೂ ಹೊತ್ತುಕೊಳ್ಳುವವ. ಜಗತ್ತಿನ ಐಶ್ವರ್ಯಕ್ಕೆಲ್ಲ ಅಧಿದೇವತೆಯಾದ ಲಕ್ಷ್ಮಿಯ ಗಂಡನಾದರೂ ಅವನಿಗೇನು ಹೆಮ್ಮೆಯಲ್ಲ, ಬಿಂಕವಿಲ್ಲ, ಬಿಗುಮಾನವಿಲ್ಲ. ಭಕ್ತಿಯಿಂದ ಬಡತನದ ಪೂಜೆ ನಡೆದರೂ, ಅಲ್ಲಿ ಎಂದೆಂದಿಗೂ ನೆಲೆಸಿರುವನು.

**ಅವ್ವೆ** – ಇಡೀ ಬ್ರಹ್ಮಾಂಡಕ್ಕೆ ತಾಯಿಯಾದ ಲಕ್ಷ್ಮಿ. ಮೂಲಪ್ರಕೃತಿ.

**ಬಿಂದು ಗಂಗೋದಕ** – ಒಂದು ತೊಟ್ಟು ನೀರು (ಪೂಜೆಯಲ್ಲಿ).

**ತನ್ನ ಸಕಲ ಸ್ವಾತಂತ್ರ್ಯದಲಿ ಸರಿಭಾಗ...** – ತನ್ನ ಸಂಕಲ್ಪಾನುಸಾರವಾಗಿ, ಭಕ್ತನ ಯೋಗ್ಯತೆಗೆ ತಕ್ಕಂತೆ (ಸರಿ) ಪದವಿಯನ್ನು ವೈಕುಂಠದಲ್ಲಿ (ತನ್ನರಮನೆ) ಒದಗಿಸಿಕೊಡುವನು.

**ಅಂಡಜಾಧಿಪ** – ಅಂಡ–ಜ ವೆಂದರೆ ಮೊಟ್ಟೆಯಿಂದ ಹೊರಬರುವ ಹಕ್ಕಿ; ಇಲ್ಲಿ ಗರುಡ, ಅದಕ್ಕೆ ಒಡೆಯ.

**ತೊಂಡರು** – ಭಕ್ತರು.

**Classification:** Keerthane
**Ankita:** purandara vittala
**Location:** NA
**Category:** Krishna Stuti, Bhakti
**Sub-Category:** Lakshmi, garva, tulasi, gangodaka, paramatma, Vishnu, purana, puje, pandava, kudure, Krishna, bhakti, mana, mane, mukunda, pushpa, huvu, swatantra,
**Pravachana:** NA
**Explanation:** NA